## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1391 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಐವನ್ ಡಿ'ಸೋಜಾ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 20.03.2025 |
| ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೈಬರ್ ಅಪರಾಧಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಈ ಬಗ್ಗೆ ಹತ್ತೋಟಿಗೆ ತರಲು ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ; (ವಿವರ ನೀಡುವುದು) | ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ 2022 ರಿಂದ 2025 (12-03-2025) ವರೆಗೆ ಒಟ್ಟು 206 ಸೈಬರ್ ಪ್ರಕರಣಗಳು ದಾಖಲಾಗಿರುತ್ತವೆ.<br><br>ಸೈಬರ್ ಅಪರಾಧಗಳನ್ನು ಹತ್ತೋಟಿಗೆ ತರಲು ಈ ಕೆಳಗಿನಂತೆ ಕ್ರಮ ಕೈಗೊಳ್ಳಲಾಗುತ್ತಿದೆ:-<br>➢ ಕರ್ನಾಟಕ ಪೊಲೀಸ್ ರನ್-2025 ನೇ ಕಾರ್ಯಕ್ರಮದ ಅಂಗವಾಗಿ ಸೈಬರ್ ಸೇಫ್ ಹಾಗೂ ಮಾದಕ ದ್ರವ್ಯ ವಿರೋಧಿ ಘೋಷ ವಾಕ್ಯದೊಂದಿಗೆ ಸಾರ್ವಜನಿಕರಿಗೆ ಸೈಬರ್ ಅಪರಾಧಗಳ ಬಗ್ಗೆ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿರುತ್ತದೆ.<br>➢ ಸಾಮಾಜಿಕ ಜಾಲತಾಣಗಳ ಮುಖೇನ ಆನ್‌ಲೈನ್ ವಂಚನೆ, ಹಣಕಾಸಿನ ನಷ್ಟ ಹಾಗೂ ತೊಂದರೆಗಳ ಬಗ್ಗೆ ಜಾಗೃತಿ ಸಂದೇಶಗಳನ್ನು ಬಿತ್ತರಿಸುವ ಮೂಲಕ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲಾಗುತ್ತಿದೆ.<br>➢ ಬೀಟ್ ಸಿಬ್ಬಂದಿಗಳು ಬೀಟ್ ಸಭೆ ನಡೆಸುತ್ತಿದ್ದು, ಸದರಿ ಸಭೆಗಳಲ್ಲಿ ಹಾಗೂ ಬೀಟ್ ವಾಟ್ಸ್‌ಆಪ್ ಗ್ರೂಪಿನಲ್ಲಿ ಆನ್ ಲೈನ್ ವಂಚನೆಗಳಿಗೆ ಬಲಿಯಾಗದಂತೆ ಮಾಹಿತಿ ನೀಡಲಾಗುತ್ತಿದೆ.<br>➢ ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಸೈಬರ್ ಅಪರಾಧಗಳ ಬಗ್ಗೆ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಿ ಜಾಗೃತಿ ಮೂಡಿಸಲಾಗುತ್ತಿದೆ.<br>➢ ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವ್ಯಾಪ್ತಿಯ CEN ಪೊಲೀಸ್ ಠಾಣೆಯ 16 ಹಾಗೂ ಎಲ್ಲಾ 14 ಕಾನೂನು ಮತ್ತು ಸುವ್ಯವಸ್ಥೆ ಪೊಲೀಸ್ ಠಾಣೆಗಳ 20 ಮಂದಿ ಸಿಬ್ಬಂದಿಗಳಿಗೆ ಸೈಬರ್‌ಕ್ರೈಂ ಪ್ರಕರಣಗಳ ಕುರಿತಂತೆ, ಆಧುನಿಕ ತಂತ್ರಜ್ಞಾನದ ಕುರಿತಂತೆ ಇಲಾಖಾ ವತಿಯಿಂದ ವಿಶೇಷ ತರಬೇತಿಯನ್ನು ನೀಡಿ ಸೈಬರ್‌ಕ್ರೈಂ ಪ್ರಕರಣಗಳನ್ನು ಪತ್ತೆಹಚ್ಚಲು ಕ್ರಮ ಕೈಗೊಳ್ಳಲಾಗುತ್ತಿದೆ.<br>➢ ಜಿಲ್ಲಾ ಮಟ್ಟದಲ್ಲಿ ಮತ್ತು ಠಾಣಾ ಮಟ್ಟದಲ್ಲಿ ಸಾಮಾಜಿಕ ಜಾಲತಾಣ ನಿರ್ವಹಣಾ ಕೋಶಗಳನ್ನು ರಚಿಸಲಾಗಿದ್ದು, ಸಾಮಾಜಿಕ ಜಾಲತಾಣಗಳ ಮೂಲಕ ಸಾಮಾಜದ ಶಾಂತಿ ಕದಡುವ, ಪೋಸ್ಟಗಳು, ವಿಡಿಯೋಗಳು ಮತ್ತು ದ್ವೇಷ ಭಾಷಣಗಳ ಮೇಲೆ ನಿಗಾ ಇರಿಸಲಾಗುತ್ತಿದೆ. |

| | | |
|---|---|---|
| ಆ) | ಮಂಗಳೂರು ನಗರದಲ್ಲಿ ಪೊಲೀಸ್ ವಸತಿ ಗೃಹಗಳನ್ನು ಎಷ್ಟು ಮಂದಿಗೆ ವಿತರಿಸಲಾಗಿದೆ; ಎಷ್ಟು ವಿತರಿಸಲು ಬಾಕಿ ಉಳಿದಿದೆ; (ವಿವರ ನೀಡುವುದು) | ಮಂಗಳೂರು ನಗರ ಕಮಿಷನರೇಟ್ ವ್ಯಾಪ್ತಿಯಲ್ಲಿ ಪಿಸಿ/ [illegible] ಸಿ/ಎಹೆಚ್‌ಸಿ/ಎಪಿಸಿ/ಪಿಎಸ್‌ಐ/ಆರ್‌ಎಸ್‌ಐ ಸೇರಿ ಒಟ್ಟು 1,935 ಮಂಜೂರಾತಿ ಬಲ ಇದ್ದು, ಹಾಲಿ ಮಂಗಳೂರು ನಗರದಲ್ಲಿ 752 ವಸತಿ ಗೃಹಗಳಿದ್ದು, ಎಲ್ಲಾ ವಸತಿ ಗೃಹಗಳನ್ನು ಅಧಿಕಾರಿ/ಸಿಬ್ಬಂದಿಗಳಿಗೆ ವಿತರಿಸಲಾಗಿದೆ. |
| ಇ) | ಮಂಗಳೂರು ಕಮಿಷನರೇಟ್ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ನಗರ ಪೊಲೀಸ್ ಠಾಣೆ ಇನ್ನೂ ಖಾಸಗಿ ಮನೆಯಲ್ಲಿ ಕಾರ್ಯನಿರ್ವಹಿಸುತ್ತಿದೆಯೇ; ಸ್ವಂತ ಕಟ್ಟಡ ಒತ್ತಡಕ್ಕೆ ಪ್ರಸ್ತಾವನೆ ಸಲ್ಲಿಸದೇ ಇರಲು ಕಾರಣಗಳೇನು; ಈ ಬಗ್ಗೆ ನಿರ್ಲಕ್ಷ್ಯ ವಹಿಸುತ್ತಿರುವುದು ಸರಿಯೇ; | ಮಂಗಳೂರು ನಗರ ಘಟಕದಲ್ಲಿ ಕರ್ತವ್ಯದ ಹೆಚ್ಚುವರಿ ಒತ್ತಡದ ಹಿನ್ನೆಲೆಯಲ್ಲಿ ಮಂಗಳೂರು ಗ್ರಾಮಾಂತರ ಠಾಣಾ ಸರಹದ್ದಿನ ಹಾಗೂ ಉಳ್ಳಾಲ ಠಾಣಾ ಸರಹದ್ದಿನ ಕೆಲವೊಂದು ಪ್ರದೇಶವನ್ನು ಪ್ರತ್ಯೇಕಿಸಿ ಸರ್ಕಾರದ ಆದೇಶ ಸಂಖ್ಯೆ: ಹೆಚ್ ಡಿ/150/ಪಿಓಪಿ/2015, ದಿನಾಂಕ: 18/02/2016 ರ ಆದೇಶದಂತೆ ಕಂಕನಾಡಿ ನಗರ ಠಾಣೆ ಹೊಸದಾಗಿ ಸೃಜನೆಗೊಂಡು ಕಾರ್ಯಾರಂಭ ಮಾಡಿರುತ್ತದೆ. ಕಂಕನಾಡಿ ನಗರ ಠಾಣೆಗೆ ಸ್ವಂತ ಕಟ್ಟಡ ನಿರ್ಮಾಣದ ಬಗ್ಗೆ ಜಮೀನನ್ನು ಗುರುತಿಸಲು ಸಾಕಷ್ಟು ಪ್ರಯತ್ನ ಮಾಡಲಾಗಿರುತ್ತದೆ. ಠಾಣಾ ಸರಹದ್ದು ಮಹಾನಗರ ಪಾಲಿಕೆಯ ಆಯಕಟ್ಟಿನ ಪ್ರದೇಶಗಳನ್ನು ಒಳಗೊಂಡಿರುವುದರಿಂದ ಸೂಕ್ತ ಮತ್ತು ಠಾಣಾ ಕಟ್ಟಡಕ್ಕೆ ಅವಶ್ಯವಿರುವ ಕನಿಷ್ಟ ವಿಸ್ತೀರ್ಣದ ಜಮೀನು ಇದುವರೆಗೆ ಲಭ್ಯವಾಗಿರುವುದಿಲ್ಲ. ಜಮೀನು ಲಭ್ಯವಿಲ್ಲದೇ ಇರುವುದರಿಂದ ಪ್ರಸ್ತಾವನೆ ಸಲ್ಲಿಸಿರುವುದಿಲ್ಲ. ಈ ಬಗ್ಗೆ ಯಾವುದೇ ನಿರ್ಲಕ್ಷ್ಯತೆ ವಹಿಸಿರುವುದಿಲ್ಲ.<br><br>ಪ್ರಸ್ತುತ ಮರೋಳಿ ಗ್ರಾಮದಲ್ಲಿ ಈ ಹಿಂದೆ ಮಂಗಳೂರು ಗ್ರಾಮಾಂತರ ಠಾಣಾ ಕಟ್ಟಡಕ್ಕಾಗಿ ನಿರ್ಮಾಣ ಕಾರ್ಯ ಪ್ರಾರಂಭಿಸಿ ಭಾಗಶಃ ಕಾಮಗಾರಿ ಪೂರ್ಣಗೊಂಡಿರುವ ಪ್ರದೇಶವು ಪ್ರಸ್ತುತ ಕಂಕನಾಡಿ ನಗರ ಠಾಣೆಗೆ ಒಳಪಡುತ್ತದೆ. ಸರ್ಕಾರದ ಆದೇಶ ಸಂಖ್ಯೆ: ಹೆಚ್ ಡಿ/12/ಪಿಬಿಎಲ್/2025, ಬೆಂಗಳೂರು, ದಿನಾಂಕ: 06/03/2025 ರ ಪತ್ರದಲ್ಲಿ, ಪೊಲೀಸ್ ಆಯುಕ್ತರು, ಮಂಗಳೂರು ನಗರ ಘಟಕದ ಕಂಕನಾಡಿ ನಗರ ಪೊಲೀಸ್ ಠಾಣೆಯ ನೂತನ ಠಾಣಾ ಕಟ್ಟಡವನ್ನು ಕೆ.ಎಸ್.ಪಿ.ಹೆಚ್ & ಐ.ಡಿ.ಸಿ.ಎಲ್ ನಿಗಮವು ನೀಡಿರುವ ರೂ. 194.00 ಲಕ್ಷಗಳ ಅಂದಾಜು ಪಟ್ಟಿಯಂತೆ ಶ್ರೀ ರೊನಾಲ್ಡ್ ಕೊಲಾಸೋ, ಅನಿವಾಸಿ ಭಾರತೀಯ ಉದ್ಯಮಿ ರವರು ಸಿ.ಎಸ್.ಆರ್ ಯೋಜನೆ ಅಡಿಯಲ್ಲಿ ನೀಡುವ ಅನುದಾನದಲ್ಲಿ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲು ಅನುಮತಿ ನೀಡಿ ಆದೇಶಿಸಲಾಗಿರುತ್ತದೆ. ಆದೇಶದ ಪ್ರತಿಯನ್ನು **ಅನುಬಂಧ-ಅ** ದಲ್ಲಿ ಒದಗಿಸಲಾಗಿದೆ. |
| ಈ) | ಮಂಗಳೂರು ನಗರದ ನಾಗೂರಿ ಪೊಲೀಸ್ ಠಾಣೆಯು ಖಾಸಗಿ ಮನೆಯಲ್ಲಿ ಕಾರ್ಯನಿರ್ವಹಿಸುತ್ತಿರಲು ಕಾರಣಗಳೇನು; | ಮಂಗಳೂರು ನಗರದ ನಾಗುರಿಯಲ್ಲಿರುವ ಕಂಕನಾಡಿ ನಗರ ಠಾಣೆಗೆ ಸ್ವಂತ ಕಟ್ಟಡ ಇಲ್ಲದ ಕಾರಣ ಬಾಡಿಗೆ ಮೆರೆಗೆ ಖಾಸಗಿ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ. |
| ಉ) | ಮಂಗಳೂರು ಕಮಿಷನರೇಟ್ ವ್ಯಾಪ್ತಿಯಲ್ಲಿ ಎಷ್ಟು ಪೊಲೀಸ್ ಹೆಡ್ ಕಾನ್ ಸ್ಟೇಬಲ್ ಮತ್ತು ಸಿಎಸ್‌ಐ ಹುದ್ದೆಗಳು ಖಾಲಿ ಇದೆ? (ಠಾಣೆವಾರು ವಿವರ ನೀಡುವುದು) | ಮಂಗಳೂರು ಕಮಿಷನರೇಟ್ ವ್ಯಾಪ್ತಿಯ ಠಾಣೆಗಳ ಪೊಲೀಸ್ ಹೆಡ್ ಕಾನ್ಸ್‌ಟೇಬಲ್ ಮತ್ತು ಎಎಸ್‌ಐ ಹುದ್ದೆಗಳ ವಿವರವನ್ನು **ಅನುಬಂಧ-ಆ** ದಲ್ಲಿ ಒದಗಿಸಲಾಗಿದೆ. |

ಸಂಖ್ಯೆ: ಹೆಚ್‌ಡಿ 38 ಪಿಸಿಕ್ಯೂ 2025

(ಡಾ. ಜಿ. ಪರಮೇಶ್ವರ)
ಗೃಹ ಸಚಿವರು

ಅನುಬಂಧ-ಅ

40)

<u>ಕರ್ನಾಟಕ ಸರ್ಕಾರದ ನಡವಳಿಗಳು</u>

ವಿಷಯ: ಮಂಗಳೂರು ನಗರ ಘಟಕದ ಕಂಕನಾಡಿ ನಗರ ಪೊಲೀಸ್ ಠಾಣೆಯ ನೂತನ ಠಾಣಾ ಕಟ್ಟಡವನ್ನು ಸಿಎಸ್ಆರ್ ಅಡಿಯಲ್ಲಿ ನಿರ್ಮಾಣ ಮಾಡುವ ಬಗ್ಗೆ.

ಓದಲಾಗಿದೆ: ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರು ಇವರ ಪತ್ರ ಸಂಖ್ಯೆ: ಬಿ3ಸಿ/39/2024-25, ದಿನಾಂಕ. 24.01.2025

In No. 21726
10 MAR

*****

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ, ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾನಿರೀಕ್ಷಕರವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಮಂಗಳೂರು ನಗರ ಮರೋಳಿ ಗ್ರಾಮದ ಸರ್ವೇ ನಂಬರ್ 34-1BQ ಮತ್ತು 34-1C ರಲ್ಲಿ ಒಟ್ಟು 0.15 ಎಕರೆ ಜಮೀನಿನಲ್ಲಿರುವ 9 ವಸತಿ ಗೃಹಗಳಿದ್ದು, ಸದರಿ ವಸತಿ ಗೃಹಗಳು ಶಿಥಿಲಾವಸ್ಥೆಯಲ್ಲಿದ್ದುದ್ದರಿಂದ ಮತ್ತು ಮಂಗಳೂರು ಗ್ರಾಮಾಂತರ ಠಾಣಾ ಕಟ್ಟಡವು ಪುನಶ್ಚೇತನಕ್ಕೆ ಅವಶ್ಯಕತೆ ಇದ್ದುದರಿಂದ ಶಿಥಿಲಾವಸ್ಥೆಯ ವಸತಿ ಗೃಹಗಳನ್ನು ಕೆಡವಿ ವಸತಿ ಗೃಹ ದುರಸ್ತಿ ಕಾಮಗಾರಿಗೆ ಬಿಡುಗಡೆಯಾಗಿದ್ದ ಅನುದಾನ ರೂ.10.00 ಲಕ್ಷದಲ್ಲಿ ನೂತನ ಠಾಣಾ ಕಟ್ಟಡದ ಕಾಮಗಾರಿ ಪ್ರಾರಂಭಿಸಲಾಗಿದ್ದು ಹಾಗೂ ಕಾಮಗಾರಿಗೆ ಇಲಾಖೆಯಿಂದ ಬಿಡುಗಡೆಗೊಂಡ ಅನುದಾನವನ್ನು ಒಳಗೊಂಡಂತೆ ಸ್ಥಳೀಯ ದಾನಿಗಳ ನೆರವಿನಿಂದ ಒಟ್ಟು ರೂ.21,97,170-00 ವೆಚ್ಚದ ಕಾಮಗಾರಿ ಪೂರ್ಣಗೊಂಡಿರುತ್ತದೆ ಹಾಗೂ ಮಂಗಳೂರು ನಗರದ ಮಂಗಳೂರು ಗ್ರಾಮಾಂತರ ಠಾಣಾ ವ್ಯಾಪ್ತಿಯ ತಿರುವೈಲು ಗ್ರಾಮದ ಸರ್ವೇ ನಂ. 1/2 ರಲ್ಲಿ 0.19 ಎಕರೆ ಜಮೀನನ್ನು ಲೀಸ್ ಆಧಾರದಲ್ಲಿ ಅನುಮತಿ ಪಡೆದು ಸದರಿ ಜಮೀನಿನಲ್ಲಿ ಮಂಗಳೂರು ಗ್ರಾಮಾಂತರ ಠಾಣೆಗೆ ನೂತನ ಠಾಣಾ ಕಟ್ಟಡವನ್ನು ಕೆಎಸ್ ಪಿಹೆಚ್ & ಐಡಿಸಿಎಲ್, ಲಿಮಿಟೆಡ್ ರವರ ವತಿಯಿಂದ ನಿರ್ಮಿಸಿ ದಿನಾಂಕ: 29-10-2023 ರಿಂದ ಠಾಣೆಯನ್ನು ಕಾರ್ಯಾರಂಭ ಮಾಡಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.

DG & IGP

ಮುಂದುವರೆದು, ಮಂಗಳೂರು ನಗರ ಘಟಕದಲ್ಲಿ ಕರ್ತವ್ಯದ ಹೆಚ್ಚುವರಿ ಒತ್ತಡವಿದ್ದು ಮಂಗಳೂರು ಗ್ರಾಮಾಂತರ ಠಾಣಾ ಸರಹದ್ದಿನ ಹಾಗೂ ಉಳ್ಳಾಲ ಠಾಣಾ ಸರಹದ್ದಿನ ಕೆಲವೊಂದು ಪ್ರದೇಶವನ್ನು ಪ್ರತ್ಯೇಕಿಸಿ ಹೊಸದಾಗಿ ಕಂಕನಾಡಿ ನಗರ ಪೊಲೀಸ್ ಠಾಣೆಯನ್ನು ಸೃಜಿಸಿ ಕಾರ್ಯಾರಂಭ ಮಾಡಲಾಗಿದ್ದು, ಸದರಿ ಕಂಕನಾಡಿ ನಗರ ಠಾಣೆಗೆ ಸ್ವಂತ ಠಾಣಾ ಕಟ್ಟಡ ಇಲ್ಲದ ಕಾರಣ ಮಾಸಿಕ ರೂ. 24,965-00 ಬಾಡಿಗೆಗೆ ಖಾಸಗಿ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದು ಸದರಿ ಕಟ್ಟಡವು ಹಳೆಯದಾಗಿದ್ದು, ಹಂಚಿನ ಮೇಲ್ಛಾವಣಿ ಹೊಂದಿದ್ದು ಶಿಥಿಲಾವಸ್ಥೆಯಲ್ಲಿರುತ್ತದೆಂದು ಮತ್ತು ಅನಿವಾರ್ಯವಾಗಿ ಇತರೆ ಪರ್ಯಾಯ ವ್ಯವಸ್ಥೆ ಇಲ್ಲದ ಕಾರಣ ಸದರಿ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಲಾಗುತ್ತಿದೆ. ಕಂಕನಾಡಿ ನಗರ ಠಾಣೆಗೆ ಠಾಣಾ ಸರಹದ್ದು ಮಹಾನಗರ ಪಾಲಿಕೆಯ ಆಯಕಟ್ಟಿನ ಪ್ರದೇಶಗಳನ್ನು ಒಳಗೊಂಡಿರುವುದರಿಂದ ಠಾಣಾ ಕಟ್ಟಡಕ್ಕೆ ಅವಶ್ಯವಿರುವ ಕನಿಷ್ಠ ವಿಸ್ತೀರ್ಣದ ಜಮೀನು ಇದುವರೆಗೆ ಲಭ್ಯವಾಗಿರುವುದಿಲ್ಲ. ಆದ್ದರಿಂದ ಈ ಹಿಂದೆ ಮಂಗಳೂರು ಗ್ರಾಮಾಂತರ ಠಾಣಾ ಕಟ್ಟಡಕ್ಕಾಗಿ ನಿರ್ಮಾಣ ಕಾರ್ಯ ಪ್ರಾರಂಭಿಸಿ ಭಾಗಶ: ಕಾಮಗಾರಿ ಪೂರ್ಣಗೊಂಡಿರುವ ಮರೋಳಿ ಗ್ರಾಮದ ಪ್ರದೇಶವು ಪ್ರಸ್ತುತ ಕಂಕನಾಡಿ ನಗರ ಠಾಣೆಗೆ ಒಳಪಟ್ಟಿರುವುದರಿಂದ ಸದರಿ ಅಪೂರ್ಣ ಕಟ್ಟಡದ ಕಾಮಗಾರಿಯನ್ನು ಪೂರ್ಣಗೊಳಿಸಲು ಅನುದಾನ ಮಂಜೂರಾದಲ್ಲಿ ಕಂಕನಾಡಿ ನಗರ ಠಾಣೆಗೆ ಸುಸಜ್ಜಿತ ಮತ್ತು ಸಾರ್ವಜನಿಕರ ಸೇವೆಗೆ ಅನುಕೂಲವಾಗುವಂತೆ ಉತ್ತಮವಾದ ಠಾಣಾ ಕಟ್ಟಡವನ್ನು ನಿರ್ಮಾಣ ಮಾಡಬಹುದಾಗಿದೆಂದು, ಪ್ರಸ್ತುತ ಠಾಣಾ ಕಟ್ಟಡ ತಳ ಅಂತಸ್ತು ಮತ್ತು ಮೊದಲನೆ ಮಹಡಿಯ ಮೇಲ್ಛಾವಣಿ ಮತ್ತು ಹೊರರಚನೆ ಕೆಲಸ ಮಾತ್ರ ಮುಗಿದಿರುತ್ತದೆ. ಈ ಬಗ್ಗೆ, ಶ್ರೀ. ರೊನಾಲ್ಡ್ ಕೊಲಾಸೋ ಎಂಬ ಅನಿವಾಸಿ ಭಾರತೀಯ ಉದ್ಯಮಿ ರವರು ಠಾಣಾ ಕಟ್ಟಡದ ಕಾಮಗಾರಿಯನ್ನು ಸ್ವಂತ ಹಣದಿಂದ ಪೂರ್ಣಗೊಳಿಸುವ ಬಗ್ಗೆ ಇಚ್ಛೆಯನ್ನು ವ್ಯಕ್ತಪಡಿಸಿದ್ದು ಕಂಕನಾಡಿ ನಗರ ಪೊಲೀಸ್ ಠಾಣಾ ಕಟ್ಟಡದ ನಿರ್ಮಾಣವನ್ನು ಪೂರ್ಣಗೊಳಿಸಲು ಕೆಎಸ್ ಪಿಹೆಚ್ & ಐಡಿಸಿಎಲ್ ರವರು ಒಟ್ಟು ರೂ.194.00 ಲಕ್ಷ ಮೊತ್ತಕ್ಕೆ ಅಂದಾಜು ಪಟ್ಟಿಯನ್ನು ನೀಡಿರುವುದಾಗಿ ಮತ್ತು ಶ್ರೀ ರೊನಾಲ್ಡ್ ಕೊಲಾಸೋ ರವರು ಕಾಮಗಾರಿ ವೆಚ್ಚವನ್ನು ಭರಿಸುವುದಾಗಿ ಒಪ್ಪಿಗೆ ಪತ್ರ ನೀಡಿರುವುದಾಗಿ ಸಹ ತಿಳಿಸಿರುತ್ತಾರೆ. ಶ್ರೀ ರೊನಾಲ್ಡ್ ಕೊಲಾಸೋ ರವರ ವಿರುದ್ಧ ಯಾವುದೇ ವ್ಯತಿರಿಕ್ತ

...2

12/3/25

ವರದಿಗಳು ದಾಖಲಾಗಿರುವುದಿಲ್ಲವಾದ್ದರಿಂದ, ಶ್ರೀ ರೊನಾಲ್ಡ್ ಕೊಲಾಸೋ ರವರ ಸಹಾಯದಿಂದ ಕಂಕನಾಡಿ ನಗರ ಠಾಣಾ ಕಟ್ಟಡವನ್ನು ಸಿಎಸ್‌ಆರ್ ನಿಧಿ ಅಡಿಯಲ್ಲಿ ಅಂದಾಜು ಮೊತ್ತ ರೂ.1,94,00,000/- (ರೂ. ಒಂದು ಕೋಟಿ ತೊಂಭತ್ತ ನಾಲ್ಕು ಲಕ್ಷಗಳು ಮಾತ್ರ) ಗಳಲ್ಲಿ ನಿರ್ಮಾಣ ಮಾಡಲು ಆಡಳಿತಾತ್ಮಕ ಅನುಮೋದನೆಯನ್ನು ಹಾಗೂ ಕಾಮಗಾರಿಯನ್ನು ಕೈಗೊಳ್ಳಲು ಅನುಮತಿಯನ್ನು ನೀಡುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂ. ಹೆಚ್‌ಡಿ 12 ಪಿಬಿಎಲ್ 2025**
**ಬೆಂಗಳೂರು ದಿನಾಂಕ: 06.03.2025**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಮಂಗಳೂರು ನಗರ ಘಟಕದ ಕಂಕನಾಡಿ ನಗರ ಪೊಲೀಸ್ ಠಾಣೆಯ ನೂತನ ಠಾಣಾ ಕಟ್ಟಡವನ್ನು ಕೆ.ಎಸ್.ಪಿ.ಹೆಚ್ & ಐ.ಡಿ.ಸಿ.ಎಲ್ ನಿಗಮವು ನೀಡಿರುವ ರೂ.194.00 ಲಕ್ಷಗಳ ಅಂದಾಜು ಪಟ್ಟಿಯಂತೆ ಶ್ರೀ ರೊನಾಲ್ಡ್ ಕೊಲಾಸೋ, ಅನಿವಾಸಿ ಭಾರತೀಯ ಉದ್ಯಮಿ ರವರು CSR(Corporate Social Responsibilities) ಯೋಜನೆ ಅಡಿಯ ನೀಡುವ ಅನುದಾನದಲ್ಲಿ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲು ಈ ಕೆಳಕಂಡ ಷರತ್ತಿಗೊಳಪಟ್ಟು ಅನುಮತಿ ನೀಡಿ ಆದೇಶಿಸಿದೆ.

1. ಪ್ರಸ್ತಾಪಿತ ಕಾಮಗಾರಿಗಳನ್ನು ಪೂರ್ಣಗೊಂಡ ನಂತರ ಲೋಕೋಪಯೋಗಿ ಇಲಾಖೆಯಿಂದ ಗುಣಮಟ್ಟದ ಬಗ್ಗೆ ಖಾತರಿ ಪಡಿಸಿಕೊಳ್ಳತಕ್ಕದ್ದು.
2. ಪ್ರಸ್ತಾಪಿತ ಸಿಎಸ್‌ಆರ್ ಮೊತ್ತವನ್ನು ಕೋರಿರುವ ಕಾಮಗಾರಿಗಳಿಗಲ್ಲದೇ ಮತ್ಯಾವುದೇ ಇತರೆ ಕಾಮಗಾರಿಗೆ ಬಳಸಿಕೊಳ್ಳತಕ್ಕದ್ದಲ್ಲ.
3. ಸದರಿ ಕಾಮಗಾರಿ ಸಂಬಂಧ ಹೆಚ್ಚುವರಿ ಅನುದಾನವನ್ನು ಒದಗಿಸಲು ಸರ್ಕಾರವನ್ನು ಕೋರತಕ್ಕದ್ದಲ್ಲ.
4. **ಸಿಎಸ್‌ಆರ್ ಮೊತ್ತವನ್ನು ನೀಡುತ್ತಿರುವ ಶ್ರೀ ರೊನಾಲ್ಡ್ ಕೊಲಾಸೋ ಇವರ/ಸಂಸ್ಥೆಯ ಜಾಹಿರಾತು ಫಲಕವನ್ನು ಸರ್ಕಾರದ ಅನುಮತಿ ಇಲ್ಲದೇ ಪ್ರಚುರ ಪಡಿಸತಕ್ಕದ್ದಲ್ಲ ಹಾಗೂ ಪ್ರಚಾರ ಪಡಿಸತಕ್ಕದ್ದಲ್ಲ.**
5. ಕಾಮಗಾರಿ ಪೂರ್ಣಗೊಂಡ ನಂತರ ಮೂರು ತಿಂಗಳ ಒಳಗಾಗಿ ಮೇಲ್ಕಂಡ ಷರತ್ತುಗಳನ್ನು ಪಾಲಿಸಿರುವ ಬಗ್ಗೆ ಅನುಪಾಲನಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Vanaja K.N. 6/3/25
(ಕೆ.ಎನ್. ವನಜ)
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ (ಪೊಲೀಸ್ ವೆಚ್ಚ)

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್.ಎಸ್.ಎ), (ಇ & ಎಸ್.ಎಸ್.ಎ), (ಎ & ಇ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.

2. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ನಂ.2, ನೃಪತುಂಗ ರಸ್ತೆ, ಬೆಂಗಳೂರು-560001.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು
4. ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಬೆಂಗಳೂರು.
5. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.

ಪ್ರತಿ:

1. ಮಾನ್ಯ ಗೃಹ ಸಚಿವರ ಆಪ್ತ ಕಾರ್ಯದರ್ಶಿಯವರು, ವಿಧಾನಸೌಧ, ಬೆಂಗಳೂರು
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಒಳಾಡಳಿತ ಇಲಾಖೆ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ವಿಶೇಷ ಕಾರ್ಯದರ್ಶಿ(ಪೊಲೀಸ್ ಸೇವೆಗಳು) ರವರ ಆಪ್ತ ಕಾರ್ಯದರ್ಶಿ, ಒಳಾಡಳಿತ ಇಲಾಖೆ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ(ವೆಚ್ಚ-11 ಮತ್ತು ಜಿ.ಪಂ), ವಿಧಾನಸೌಧ, ಬೆಂಗಳೂರು.
5. ಶಾಖಾ ರಕ್ಷಾಕಡತ/ಹೆಚ್ಚುವರಿ ಪ್ರತಿಗಳು.

# ಅನುಬಂಧ - ಆ

## ಪೊಲೀಸ್ ಆಯುಕ್ತರು, ಮಂಗಳೂರು ನಗರ.

| ಕ್ರ.ಸಂ | ಪೊಲೀಸ್ ಠಾಣೆ | ಹುದ್ದೆ | ಮಂಜೂರಾತಿ ಬಲ | ಹಾಲಿ ಬಲ | ರಿಕ್ತ ಸ್ಥಾನ |
|---|---|---|---|---|---|
| 1 | ದಕ್ಷಿಣ ಪೊಲೀಸ್ ಠಾಣೆ | ಎಎಸ್ಐ | 7 | 4 | 3 |
| | | ಹೆಚ್‌ಸಿ | 20 | 20 | 0 |
| 2 | ಉತ್ತರ ಪೊಲೀಸ್ ಠಾಣೆ | ಎಎಸ್ಐ | 8 | 8 | 0 |
| | | ಹೆಚ್‌ಸಿ | 19 | 19 | 0 |
| 3 | ಪೂರ್ವ ಪೊಲೀಸ್ ಠಾಣೆ | ಎಎಸ್ಐ | 8 | 7 | 1 |
| | | ಹೆಚ್‌ಸಿ | 19 | 16 | 3 |
| 4 | ಉರ್ವಾ ಪೊಲೀಸ್ ಠಾಣೆ | ಎಎಸ್ಐ | 4 | 3 | 1 |
| | | ಹೆಚ್‌ಸಿ | 14 | 14 | 0 |
| 5 | ಬರ್ಕೆ ಪೊಲೀಸ್ ಠಾಣೆ | ಎಎಸ್ಐ | 4 | 3 | 1 |
| | | ಹೆಚ್‌ಸಿ | 14 | 13 | 1 |
| 6 | ಮಹಿಳಾ ಪೊಲೀಸ್ ಠಾಣೆ | ಎಎಸ್ಐ | 4 | 4 | 0 |
| | | ಹೆಚ್‌ಸಿ | 13 | 13 | 0 |
| 7 | ಮಂ. ಗ್ರಾಮಾಂತರ ಪೊಲೀಸ್ ಠಾಣೆ | ಎಎಸ್ಐ | 4 | 4 | 0 |
| | | ಹೆಚ್‌ಸಿ | 12 | 12 | 0 |
| 8 | ಕೊಣಾಜೆ ಪೊಲೀಸ್ ಠಾಣೆ | ಎಎಸ್ಐ | 4 | 4 | 0 |
| | | ಹೆಚ್‌ಸಿ | 14 | 12 | 2 |
| 9 | ಉಳ್ಳಾಲ ಪೊಲೀಸ್ ಠಾಣೆ | ಎಎಸ್ಐ | 7 | 5 | 2 |
| | | ಹೆಚ್‌ಸಿ | 17 | 15 | 2 |
| 10 | ಕಂಕನಾಡಿ ನಗರ ಪೊಲೀಸ್ ಠಾಣೆ | ಎಎಸ್ಐ | 6 | 6 | 0 |
| | | ಹೆಚ್‌ಸಿ | 18 | 18 | 0 |
| 11 | ಪಣಂಬೂರು ಪೊಲೀಸ್ ಠಾಣೆ | ಎಎಸ್ಐ | 5 | 5 | 0 |
| | | ಹೆಚ್‌ಸಿ | 13 | 13 | 0 |
| 12 | ಕಾವೂರು ಪೊಲೀಸ್ ಠಾಣೆ | ಎಎಸ್ಐ | 5 | 4 | 1 |
| | | ಹೆಚ್‌ಸಿ | 14 | 13 | 1 |
| 13 | ಬಜಪೆ ಪೊಲೀಸ್ ಠಾಣೆ | ಎಎಸ್ಐ | 6 | 6 | 0 |
| | | ಹೆಚ್‌ಸಿ | 15 | 15 | 0 |
| 14 | ಸುರತ್ಕಲ್ ಪೊಲೀಸ್ ಠಾಣೆ | ಎಎಸ್ಐ | 5 | 4 | 1 |
| | | ಹೆಚ್‌ಸಿ | 15 | 14 | 1 |
| 15 | ಮುಲ್ಕಿ ಪೊಲೀಸ್ ಠಾಣೆ | ಎಎಸ್ಐ | 5 | 4 | 1 |
| | | ಹೆಚ್‌ಸಿ | 14 | 14 | 0 |
| 16 | ಮೂಡಬಿದ್ರೆ ಪೊಲೀಸ್ ಠಾಣೆ | ಎಎಸ್ಐ | 4 | 4 | 0 |
| | | ಹೆಚ್‌ಸಿ | 14 | 14 | 0 |

| | | | | | |
|---|---|---|---|---|---|
| 17 | ಸಂಚಾರ ಉತ್ತರ ಪೊಲೀಸ್ ಠಾಣೆ | ಎಎಸ್ಐ | 7 | 7 | 0 |
| | | ಹೆಚ್‌ಸಿ | 21 | 20 | 1 |
| 18 | ಸಂಚಾರ ಪಶ್ಚಿಮ ಪೊಲೀಸ್ ಠಾಣೆ | ಎಎಸ್ಐ | 7 | 7 | 0 |
| | | ಹೆಚ್‌ಸಿ | 21 | 21 | 0 |
| 19 | ಸಂಚಾರ ಪೂರ್ವ ಪೊಲೀಸ್ ಠಾಣೆ | ಎಎಸ್ಐ | 8 | 8 | 0 |
| | | ಹೆಚ್‌ಸಿ | 21 | 20 | 1 |
| 20 | ಸಂಚಾರ ದಕ್ಷಿಣ ಪೊಲೀಸ್ ಠಾಣೆ | ಎಎಸ್ಐ | 8 | 8 | 0 |
| | | ಹೆಚ್‌ಸಿ | 22 | 22 | 0 |
| 21 | ಸೆನ್ ಕ್ರೈಂ ಪೊಲೀಸ್ ಠಾಣೆ | ಎಎಸ್ಐ | 2 | 2 | 0 |
| | | ಹೆಚ್‌ಸಿ | 14 | 14 | 0 |